ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಮಂಗಳೂರು ಉತ್ತರ ವಲಯ, ಬಲ್ಮಠ, ಮಂಗಳೂರು

ಕ್ರ.ಸಂ:-ಬಿ1/ಮಾ.ನ.ಬಗ್ಗೆ/1647/2019-20 ದಿನಾಂಕ:-14/01/2020

ಜ್ಞಾಪನಾ

ವಿಷಯ:- ಶ್ರೀ ರವಿಶಂಕರ ವಿದ್ಯಾ ಮಂದಿರ ಕೊಂಚಾಡಿ ಮಂಗಳೂರು ಉತ್ತರ ವಲಯ
ಇದರ ಮಾನ್ಯತೆ ನವೀಕರಣದ ಬಗ್ಗೆ.

ಉಲ್ಲೇಖ:-01.ಸಂಬಂಧಿಸಿದ ಶಾಲಾ ಸಂಚಾಲಕರ ಪ್ರಸ್ತಾವನೆ ದಿನಾಂಕ: 29/11/2019
02.ಕ್ಷೇತ್ರ ಶಿಕ್ಷಣಾಧಿಕಾರಿ, ಮಂಗಳೂರು ಉತ್ತರ ವಲಯ ಇವರ ಶಾಲಾ ಸಂದರ್ಶನ ವರದಿ ದಿನಾಂಕ;-09/01/2020

****

ಶ್ರೀ ರವಿಶಂಕರ ವಿದ್ಯಾ ಮಂದಿರ ಟ್ರಸ್ಟ್ (ರಿ) 4ನೇ ಬಿ ಬ್ಲಾಕ್ ಜಯನಗರ ಬೆಂಗಳೂರು-4 ಈ ಶಾಲೆಯ ಆಡಳಿತ ಮಂಡಳಿಗೊಳಪಡುವ ಶ್ರೀ ರವಿಶಂಕರ ವಿದ್ಯಾ ಮಂದಿರ ಕೊಂಚಾಡಿ ಮಂಗಳೂರು ಉತ್ತರ ವಲಯ ಈ ಶಾಲಾ ಮಾನ್ಯತೆ ನವೀಕರಣಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.ಇದನ್ನು ಪರಿಶೀಲಿಸಿ ಉಲ್ಲೇಖ(2) ರ ಭೇಟಿ ವರದಿಯಪ್ವಯ ಈ ಕೆಳಕಂಡ ಷರತ್ತುಗಳೊಂದಿಗೆ ಈ ಕೆಳಕಾಣಿಸಿದ ತರಗತಿಗಳಿಗೆ ತಾತ್ಕಾಲಿಕ ಮಾನ್ಯತೆಯನ್ನು ನವೀಕರಿಸಿದೆ.

ಕ್ರ.ಸಂ	ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಹೆಸರು	ಶ್ರೀ ರವಿಶಂಕರ ವಿದ್ಯಾ ಮಂದಿರ ಟ್ರಸ್ಟ್ (ರಿ) 4ನೇ ಬಿ ಬ್ಲಾಕ್ ಜಯನಗರ ಬೆಂಗಳೂರು-4
01	ಶಾಲೆಯ ಹೆಸರು	ಶ್ರೀ ರವಿಶಂಕರ ವಿದ್ಯಾ ಮಂದಿರ ಕೊಂಚಾಡಿ ಮಂಗಳೂರು
02	ಶಾಲಾ ನೋಂದಣಿ ಪ್ರಾಧಿಕಾರ ಮತ್ತು ಆದೇಶ ಸಂಖ್ಯೆ	ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ:ಡಿ4/366/ಹೊ.ಕಿ.ಕ.ಅ./03/09-10 ದಿನಾಂಕ:30-09-2009
03	ಹಿಂದೆ ಮಾನ್ಯತೆ ನೀಡಿದ ಆದೇಶ	ಕ್ಷೇತ್ರಶಿಕ್ಷಣಾಧಿಕಾರಿಗಳು ಕ್ಷೇತ್ರಶಿಕ್ಷಣಾಧಿಕಾರಿ,ಕಚೇರಿ ಮಂಗಳೂರು ಉತ್ತರ ವಲಯ

ಮಾನ್ಯತೆ ನವೀಕರಣ ವಿವರ

ಕ್ರ. ಸಂ.	ತರಗತಿಗಳು	ವಿಭಾಗಗಳು	ಮಾಧ್ಯಮ	ಮಾನ್ಯತೆ ನವೀಕರಿಸಿದ ಅವಧಿ	ಮಾನ್ಯತೆ ನವೀಕರಣ ವಹಿ ಪುಟ ಸಂಖ್ಯೆ
1	1 ರಿಂದ 8ನೇ ತರಗತಿ	ತಲಾ ಒಂದೊಂದು ವಿಭಾಗ	ಅನುದಾನ ರಹಿತ ಆಂಗ್ಲ	2019-20 ರಿಂದ 2021-22	ವ್ಯಾಲುಂ ನಂ01 ಪುಟ ಸಂಖ್ಯೆ81 ಕ್ರ.ಸಂ.03 ರಲ್ಲಿ ದಾಖಲಿಸಿದೆ

ಷರತ್ತುಗಳು:-

1. ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಮ 1999 ರ ಉಪನಿಯಮ 04 ರಲ್ಲಿ ವಿಧಿಸಿದ ಎಲ್ಲಾ ಷರತ್ತುಗಳನ್ನು ಪೂರೈಸುವುದು.
2. ಇಲಾಖಾ ನಿಯಮಗಳ ಪ್ರಕಾರ ನಿಗದಿತ ವಿದ್ಯಾರ್ಹತೆ ಹೊಂದಿರುವ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡುವುದು.
3. ಇಲಾಖೆ ಅನುಮತಿ ಇಲ್ಲದೆ ಹೆಚ್ಚುವರಿ ವಿಭಾಗಗಳನ್ನು ತೆರೆಯಬಾರದು.

Scanned with OKEN Scanner

4. ಸರ್ಕಾರ ನಿಗದಿ ಪಡಿಸಿದ ಪಠ್ಯ ಕ್ರಮಗಳನ್ನು ಮಾತ್ರ ಶಾಲೆಯಲ್ಲಿ ಬೋಧಿಸುವುದು.
5. ಪ್ರತಿ ತರಗತಿಯಲ್ಲಿ ಕನಿಷ್ಠ 30 ದಾಖಲಾತಿಗೆ 25 ಮಕ್ಕಳ ಹಾಜರಾತಿ ಕಾಯ್ದುಕೊಳ್ಳುವುದು.
6. ಎಲ್ಲಾ ದಾಖಲೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿ, ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದ ಸಂದರ್ಭದಲ್ಲಿ ಪರಿಶೀಲನೆಗಾಗಿ ಒದಗಿಸುವುದು.
7. ಶಾಲೆಯಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.
8. ಮಹಿಳಾ ನೌಕರರಿದ್ದಲ್ಲಿ ನಿಯಮಾನುಸಾರ ಪ್ರಸೂತಿ ರಜೆ ಮಂಜೂರು ಮಾಡುವುದು.
9. ಮಕ್ಕಳ ವೈದ್ಯಕೀಯ ತಪಾಸಣೆಯನ್ನು ನಿಯಾಮಾನುಸಾರ ಮಾಡುವುದು ಮತ್ತು ಆರೋಗ್ಯ ಇಲಾಖೆಯಿಂದ ಮಕ್ಕಳಿಗೆ ನೀಡುವ ವೈದ್ಯಕೀಯ ಸೇವೆಯನ್ನು ಒದಗಿಸಲು ಸಹಕರಿಸುವುದು.
10. ಸರ್ಕಾರ/ಇಲಾಖೆ ಕಾಲ ಕಾಲಕ್ಕೆ ಹೊರಡಿಸುವ ಸುತ್ತೋಲೆಗಳು/ ಆದೇಶಗಳನ್ನು ಪಾಲಿಸುವುದು.
11. ಇಲಾಖೆ ನಿಗದಿ ಪಡಿಸಿದ ಶುಲ್ಕಗಳನ್ನು ಮಾತ್ರ ವಸೂಲು ಮಾಡುವುದು.
12. ಶಿಕ್ಷಕರಿಗೆ ಸೇವಾ ಭದ್ರತೆ ನೀಡಿ ನಿಯಾಮಾನುಸಾರ ನೇಮಕಾತಿ ಮಾಡುವುದು.
13. ಆಡಳಿತ ಮಂಡಳಿಯ ಹೆಸರಿನಲ್ಲಿ ಜಮೀನು ನೋಂದಾಯಿಸುವುದು.
14. ಪ್ರತೀ ತರಗತಿಗೆ ಅಗ್ನಿ ನಿರೋಧಕ ಆಳವಡಿಸುವುದು.
15. ಕರ್ನಾಟಕ ಶಿಕ್ಷಣ ಕಾಯಿದೆ –1983 ಹಾಗೂ ತತ್ಸಬಂಧಿತ ನಿಯಮಗಳನ್ನು ತಪ್ಪದೇ ಪಾಲಿಸುವುದು.
16. ಶಿಕ್ಷಣ ಹಕ್ಕು ಕಾಯಿದೆ 2009 ನ್ನು ಅನುಸರಿಸುವುದು ಹಾಗೂ ತತ್ಸಂಬಂಧ ಸರ್ಕಾರ ಕಾಲಕಾಲಕ್ಕೆ ನೀಡುವ ಆದೇಶ/ಸುತ್ತೊಲೆಗಳನ್ನು ಕಡ್ಡಾಯವಾಗಿ ಪಾಲಿಸುವುದು.
17. ಕಡ್ಡಾಯವಾಗಿ ಶಾಲಾ ಸೂಚನಾ ಫಲಕದಲ್ಲಿ ಶುಲ್ಕದ ಮಾಹಿತಿ ಪ್ರಕಟಿಸುವುದು.
18. ಶಾಲೆಗೆ ಸಿ.ಸಿ.ಕ್ಯಾಮೆರವನ್ನು ಅಳವಡಿಸುವುದು.
19. ಗಂಡು ಮತ್ತು ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯದ ಸೌಲಭ್ಯಗಳನ್ನು ಒದಗಿಸುವುದು.
20. ಮಕ್ಕಳ ಸುರಕ್ಷತಾ ಸಮಿತಿಗಳನ್ನು ರಚಿಸುವುದು ಮತ್ತು ಹೆಣ್ಣು ಮಕ್ಕಳ ಸುರಕ್ಷತೆಯ ಬಗ್ಗೆ ವಿಶೇಷ ಮುತುವರ್ಜಿಯನ್ನು ವಹಿಸುವುದು.
21. ಶಾಲೆಯ 100 ಮೀಟರ್ ವ್ಯಾಪ್ತಿಯಲ್ಲಿ ತಂಬಾಕು ಮುಕ್ತ ಪ್ರದೇಶ ಎಂಬ ಬಗ್ಗೆ ಸೂಚನಾ ಫಲಕವನ್ನು ಶಾಲಾ ಆವರಣದಲ್ಲಿ ಹಾಕುವುದು.

ಕ್ಷೇತ್ರ ಶಿಕ್ಷಣಾಧಿಕಾರಿಗಳು
ಮಂಗಳೂರು ಉತ್ತರ ವಲಯ

ರಿಗೆ:-

ಸಂಚಾಲಕರು ಶ್ರೀ ರವಿಶಂಕರ ವಿದ್ಯಾ ಮಂದಿರ ಟ್ರಸ್ಟ್ (ರಿ) 4ನೇ ಬಿ ಬ್ಲಾಕ್ ಜಯನಗರ ಬೆಂಗಳೂರು-4

ಪ್ರತಿಯನ್ನು :

1. ಮುಖ್ಯ ಶಿಕ್ಷಕರು, ಶ್ರೀ ರವಿಶಂಕರ ವಿದ್ಯಾ ಮಂದಿರ ಕೊಂಚಾಡಿ ಮಂಗಳೂರು ಉತ್ತರ ವಲಯ
2. ಕಛೇರಿ ಪ್ರತಿ

Scanned with OKEN Scanner